ಆರ್. ಇ. ಸಿ. ಯವರು ಒಪ್ಪಿಲ್ಲವೆಂದರೆ ನಮ್ಮ ರಾಜ್ಯ ಸರ್ಕಾರದವರೇ ಹಣವನ್ನು ಒದಗಿಸಿ ಈ ಜಾಗ ಗಳಿಗೆ ವಿದ್ಯುತ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಜೆ. ಎಸ್. ದೇಶ್‌ಮುಖ್.— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ಪಾರ್ಟಿಯವರು ಹೇಳಿದಹಾಗೆ ಕೆಲವೊಂದು ಗ್ರಾಮಗಳಿಗೆ ವಿದ್ಯುದೀಕರಣವನ್ನು ಮಾಡಲಾಗಿದೆ. ಇನ್ನು ಕೆಲವೊಂದು ಗ್ರಾಮಗಳಿಗೆ ಏನೂ ಸರ್ವೀಸ್ ಆಗಿಲ್ಲವೆಂದು ಲಿಸ್ಟ್ ಕೊಟ್ಟರು. ಆದರ ಬಗ್ಗೆ ಒನೇ ಪಂಚವಾರ್ಷಿಕ ಯೋಜನೆಯಲ್ಲಿ ಮಂಗಿಸುತ್ತೇವೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅಧ್ಯಕ್ಷರೇ, ಒನೇ ಯೋಜನೆ ಎಂದರೆ ೫ ವರ್ಷಗಳಲ್ಲಿ ಮಾಡುತ್ತೀರಾ ? ಇವತ್ತು ನೀವು ಎರಡು ರೀತಿಯಲ್ಲಿ ಮಾಡಬಹುದು. ನಿಮ್ಮ ಆರ್. ಇ. ಸಿ. ಪ್ರೋಗ್ರಾಮ್ ಪ್ರಕಾರ ಕೆಲವು ಹಳ್ಳಿಗಳನ್ನು ತಾವು ತೆಗೆದುಕೊಳ್ಳಬಹುದು. ಹಾಗೂ ಎಲ್ಲೆಲ್ಲಿ ಹ್ಯಾಮ್ಲೆಟ್ಸ್ ಮತ್ತು ತಾಂಡಗಳು ಆರ್. ಇ. ಸಿ. ನಲ್ಲಿ ಇನ್‌ಕ್ಲೂಡ್ ಆಗಿಲ್ಲ ಅವಕ್ಕೆ ಸರ್ಕಾರದ ವತಿಯಿಂದಲೇ ಮಾಡಿದರೆ ಅಲ್ಲಿಯ ಜನರಿಗೆ ಸಹಾಯವಾಗುತ್ತದೆ. ಇವತ್ತು ಅರ್ಧ ಊರಿಗೆ ಬೆಳಕು. ಅರ್ಧ ಊರಿಗೆ ಕತ್ತಲನ್ನು ಕೊಟ್ಟಿದ್ದೀರಿ. ಇವತ್ತು ತಾಂಡದಲ್ಲಿರುವ, ಹಾಂಲೆಟ್‌ನಲ್ಲಿ ಇರುವ ಜನರೆಲ್ಲಾ ಬಡವರೇ ಆಗಿದ್ದಾರೆ. ಅಲ್ಲಿಗೂ ತಾವು ವಿದ್ಯುದೀಕರಣ ಮಾಡುವುದಕ್ಕೆ ಕಾರ್ಯಕ್ರಮವನ್ನು ಅದಷ್ಟಂ ಬೇಗ ತೆಗೆದುಕೊಳ್ಳುತ್ತೀರಾ ? ಇವತ್ತು ನಿಮ್ಮಲ್ಲಿ ಈ ಬಗ್ಗೆ ಫಂಡ್ಸ್ ಇದೆ. ಅನೇಕ ಹಳ್ಳಿಗಳಲ್ಲಿ ತಾವೇ ಡಿಸಿಷನ್ ತೆಗೆದುಕೊಂಡು ಎಲೆಕ್ಟ್ರಿಫಿಕೇಷನ್ ಮಾಡಿದ್ದೀರಿ. ಸರ್ಕಾರ ಸ್ವಂತ ಹಣ ಕೊಟ್ಟು ಕೆಲವು ಕಡೆ ವಿದ್ಯುದೀಕರಣ ಮಾಡಿದೆ. ಈ ರೀತಿ ಈ ಹಳ್ಳಿಗಳಲ್ಲೂ ಮಾಡುವುದಕ್ಕೆ ಏನು ತೊಂದರೆ ತವಂಗೆ ಇದೆ. ಈ ಬಗ್ಗೆ ನಿಧಾನವಾಗಿ ವಿವರ ತರಿಸಿಕೊಂಡು ಹೇಳಿ. ಆತುರ ಬೇಡ.

ಅಧ್ಯಕ್ಷರು.— ಅವರ ಪಕ್ಕದಲ್ಲೇ [ಹೋಗಿ ಏಕೆ ಕೇಳಬಾರದು ? ಆ ತಾಲ್ಲೂಕಿನ ಎಲ್ಲಾ ಮಾಹಿತಿ ತವಂಗೆ ಸಿಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ. — ಅಲ್ಲಿ ಏನು ಸಿಗುತ್ತದೆ ಸ್ವಾಮಿ ? ಈ ತಾಲ್ಲೂಕಿನಲ್ಲಿ ಎಷ್ಟು ಗ್ರಾಮ ಇದೆ. ತಾಂಡ ಇದೆ ಪಾಳ್ಯ ಇದೆ ಎಂಬುದು ಹಾಗೂ ಎಷ್ಟು ಹಳ್ಳಿಗಳಿಗೆ ವಿದ್ಯುದೀಕರಣ ಆಗಿದೆ ಎಂದು ತಿಳಿಯುತ್ತದೆ. ಹಣದ ಬಗ್ಗೆ, ಕೆಲಸಕಾರ್ಯಗಳನ್ನು ಹಾಕಿಕೊಳ್ಳುವ ಬಗ್ಗೆ ನಾವು ಇಲ್ಲೇ ಕೇಳಬೇಕು. ಅಲ್ಲಿಗೆ ವೈರ್ ಇಲ್ಲಿಂದ ಹೋಗಬೇಕು. ಎಲ್ಲಾ ವಿಷಯ ಇಲ್ಲಿಂದಲೇ ಹೋಗಬೇಕೇಕು, ಅಲ್ಲಿಯ ಎ. ಇ. ಇ. ಕೈಯಲ್ಲಿ ಏನೂ ಇಲ್ಲ.

ಶ್ರೀ ಜೆ. ಎಸ್. ದೇಶ್‌ಮುಖ್.— ಅಧ್ಯಕ್ಷರೇ, ಗುರುಮಿಂಟ್‌ಕಲ್ ಕ್ಷೇತ್ರದಲ್ಲಿ ಒಟ್ಟು ೮೬ ಗ್ರಾಮಗಳಿದ್ದು ಅವುಗಳ ಪೈಕಿ ೬೨ ಗ್ರಾಮಗಳಿಗೆ ೩೧-೩-೧೯೮೪ ರಲ್ಲಿ ವಿದ್ಯುತ್ ಸರಬರಾಜು ಮಾಡ ಲಾಗಿದೆ. ೧೯೮೪-೮೫ ರಲ್ಲಿ ಗುರಿ ೬ ಇದ್ದು ಸಾಧನೆ ೬ ಆಗಿರುತ್ತದೆ. ಹಾಗೂ ೧೯೮೫-೮೬ ರಲ್ಲಿ ಗುರಿ ೯ ಇದ್ದು ಡಿಸೆಂಬರ್ ೧೯೮೫ ರವರೆಗೆ ೫ ಗ್ರಾಮಗಳ ಸಾಧನೆ ಆಗಿದೆ. ಉಳಿದ ೪ ಗ್ರಾಮಗಳನ್ನು ಮಾರ್ಚ್ ೧೯೮೬ರ ಒಳಗೆ ವಿದ್ಯುದ್ದೀಕರಣ ಮಾಡಲು ಉದ್ದೇಶಿಸಿದೆ. ಉಳಿದ ೯ ಗ್ರಾಮಗಳಿಗೆ ೧೯೮೬-೮೭ರಲ್ಲಿ ವಿದ್ಯುತ್ ಒದಗಿಸುವ ಗುರಿ ಇದೆ. ಇದನ್ನೂ ತಾಂಡಗಳ ಬಗ್ಗೆ ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಮ್ ನಲ್ಲಿ ತೆಗೆದುಕೊಂಡು ೧೯೮೬ ರಲ್ಲಿ ಸಂಪೂರ್ಣವಾಗಿ ಮಂಗಿಸುತ್ತೇವೆಂದು ಹೇಳುತ್ತೇನೆ.

ಹೊಸದುರ್ಗ ತಾಲ್ಲೂಕಿನ ಕಂಚೀಪುರ ಗ್ರಾಮದ ಸರ್ವೆ ನಂ. ೧೨೨ರ ಜಮೀನಿನ ಅಳತೆ ಬಗ್ಗೆ.

೧೭೮೪. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ), ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).— ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊಸದುರ್ಗ ತಾಲ್ಲೂಕಿನ ಕಂಚೀಪುರ ಗ್ರಾಮದ ಸರ್ವೆ ನಂ. ೧೨೨ರ ಜಮೀನನ್ನು ೧೫ ವರ್ಷಗಳಿಂದ ಸಮೀಕ್ಷೆ ಮಾಡಿ ಅಳತೆ ಮಾಡದಿರುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರಂ ತ್ವರಿತ ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನ ಮಂತ್ರಿಗಳು).—

ಅ) ಹೌದು.

ಆ) ಈ ಜಮೀನನ್ನು ಪೂರಾ ಸರ್ವೆ ಮಾಡಿಸಿ ಪರತ್ತು ಉಲ್ಲಂಘನೆ ಮಾಡಿರುವ ಪ್ರಕರಣಗಳಲ್ಲಿ ಭೂ ಮಂಜೂರಾತಿಯನ್ನು ವಜಾ ಮಾಡಿ, ಭೂ ಮಂಜೂರಾತಿ ನಿಯಮದ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ ಸುಮಾರು ೨೦ ಜನ ರೈತರಿಗೆ ತಲಾ ಎರಡು ಎಕರೆ ರೀತಿಯಲ್ಲಿ ಜಮೀನನ್ನು ಕೊಟ್ಟು ೧೫ ವರ್ಷವಾಯಿತು, ಇವರಿಗೆ ೧೫ ವರ್ಷಗಳ ಹಿಂದೆಯೇ ಸಾಗುವಳಿ ಚೀಟಿಯನ್ನು ಕೊಡಲಾಗಿದೆ. ೧೫ ವರ್ಷದಿಂದ ಈ ೪೦ ಎಕರೆ ಜಮೀನನ್ನು ಅಳತೆ ಮಾಡಿ ಬಾಂಡ್ ಕಲ್ಲನ್ನು ಹಾಕಿಲ್ಲ. ಈ ಬಗ್ಗೆ ಇಲಾಖೆಯವರಿಗೆ ಇನ್ನೂ ಎಷ್ಟು ವರ್ಷ ಬೇಕು ಎಂದು ಹೇಳುವುಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರದಲ್ಲಿ ಅಲ್ಲಿ ವಿಳಂಬ ಆಗಿದೆ. ಈಗಾಗಲೇ ಈ ಬಗ್ಗೆ ಹಿಂದೆ ಉತ್ತರ ಕೊಟ್ಟಿದ್ದೇನೆ. ಆದಷ್ಟು ಬೇಗ ಕಾರ್ಯಕ್ರಮ ತೆಗೆದುಕೊಂಡು ಇದನ್ನು ಸರಿ ಪಡಿಸುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ರೆವಿನ್ಯೂ ಕಮಿಷನರ್ ಅವರು ೧೯೮೫ ರಲ್ಲೇ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ, ಹೊಸದುರ್ಗ ತಾಲ್ಲೂಕಿನ ತಹಶೀಲ್ದಾರರಿಗೆ ಪತ್ರವನ್ನು ಬರೆದು ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರು. ಇಲ್ಲಿ ರೆವಿನ್ಯೂ ಇಲಾಖೆಯವರು ಬೇರೆಯವರ ಜೊತೆ ಶಾಮಿಲಾಗಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆಯವರ ಮೇಲೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ ?

ಶ್ರೀ ಜಿ. ರಾಮದಾಸ್.—ಅಧ್ಯಕ್ಷರೇ, ಈ ಬಗ್ಗೆ ನಾನು ಕೂಡಾ ತಹಶೀಲ್ದಾರ್ ಅವರಿಗೆ ಪರ್ಸನಲ್ಲಾಗಿ ಹೇಳೀದ್ದೇನೆ. ಆದರೂ ಗವರ್ನಮೆಂಟ್ಕೆ ತೆಗೆದುಕೊಂಡಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಲ್ಲಿ ಏನಾಗಿದೆ ಎಂದರೆ, ೨೯ ಜನರಿಗೆ ಗ್ರಾಂಟ್ ಕ್ಯಾನ್ಸಲ್ ಮಾಡಲಾಗಿದೆ. ಹಾಗೂ ಈ ರೀತಿಯಿಂದಾಗಿ ಇಲ್ಲಿ ತಡ ಆಗಿದೆ. ವಿಳಂಬ ಆಗಿದೆ. ಈ ಬಗ್ಗೆ ಡೆಪ್ಯುಟಿ ಕಮಿಷನರ್ ಅವರಿಗೆ ಆದೇಶ ಕೊಟ್ಟು ಅದನ್ನು ಪೂರ್ಣಗೊಳಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—೨೦ ಜನರಿಗೆ ಬಾಂಡ್ ಕಲ್ಲನ್ನು ಎಷ್ಟು ದಿವಸದಲ್ಲಿ ಹಾಕಿ ಕೊಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾನೂನು ಪ್ರಕಾರ ಏನು ಕೊಟ್ಟಿದ್ದೆವೋ ಅದನ್ನು ಸರಿ ಪಡಿಸುತ್ತೇವೆ. ಆದರೆ ೨೯ ಜನ ಏನು ಕಾನೂನು ಉಲ್ಲಂಘನೆ ಮಾಡಿದ್ದಾರೆ ಆ ೨೯ ಜನರಿಗೆ ಏನೂ ಮಾಡುವುದಕ್ಕಾಗುವುದಿಲ್ಲ.

ಚುಕ್ಕೆ ಪ್ರಶ್ನೆ. ೧೮೬೨

ಅಧ್ಯಕ್ಷರು.—ಈ ಪ್ರಶ್ನೆಯನ್ನು ಮುಂದೂಡಲಾಗಿದೆ.

ಚುಕ್ಕೆ ಪ್ರಶ್ನೆ. ೧೨೫೫.—(ಮಾನ್ಯ ಸದಸ್ಯರು ಗೈರುಹಾಜರಿ)

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೇ, ಪ್ರಶ್ನೆಗಳು ಏಕೆ ಕ್ಯಾರೇಡ್ ಓವರ್ ಆಗುತ್ತವೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾಹಿತಿ ಬಾರದೇ ಇರುವ ಕಾರಣ ಅವನ್ನು ಮುಂದಕ್ಕೆ ಹಾಕಲಾಗುತ್ತದೆ.

ಚುಕ್ಕೆ ಪ್ರಶ್ನೆ. ೬೯೩